6

# ನಮ್ಮ ದೇವರು ನೈತಿಕತೆಯುಳ್ಳಾತನು

ದೇವರ ಬಗೆಗಿನ ನಮ್ಮ ಇಲ್ಲಿಯವರೆಗಿನ ಅಧ್ಯಯನಗಳಲ್ಲಿ, ಆತನು ಸರ್ವವ್ಯಾಪಿ, ಸರ್ವಜ್ಞಾನಿ, ಸರ್ವಶಕ್ತ, ಸೃಷ್ಟಿಸುವಾತನು, ಹಾಗೂ ಐತಿಹಾಸಿಕವಾದಾತನು ಎಂಬುದನ್ನು ಕಲಿತುಕೊಂಡಿದ್ದೇವೆ. ಈ ಗುಣಲಕ್ಷಣಗಳಲ್ಲಿ ಪ್ರತಿಯೊಂದಕ್ಕೂ ನಮ್ಮ ಜೀವಿತಗಳ ಮೇಲೆ ಭಾರವೂ ಪ್ರಭಾವವೂ ಇರುವದೆಂಬನ್ನು ಕಂಡುಕೊಂಡಿದ್ದೇವೆ. ನಾವು ಅಧ್ಯಯನ ಮಾಡುತ್ತಿರುವ ದೇವರು ಅಸ್ತಿತ್ವದಲ್ಲಿ ಇಲ್ಲದಿದ್ದರೆ ನಾವೂ ಅಸ್ತಿತ್ವದಲ್ಲಿ ಇರುತ್ತಿರಲಿಲ್ಲ. "ಆತನಲ್ಲಿ ನಾವು ಜೀವಿಸುತ್ತೇವೆ, ಚಲಿಸುತ್ತೇವೆ ಹಾಗೂ ಅಸ್ತಿತ್ವದಲ್ಲಿರುತ್ತೇವೆ, ..." (ಅಪೊಸ್ತಲರ ಕೃತ್ಯ 17:28). ನಮ್ಮ ದೇವರು ಹತ್ತಿರದಲ್ಲಿದ್ದಾನೆ, ಬಲವುಳ್ಳವನಾಗಿದ್ದಾನೆ ಹಾಗೂ ಅರ್ಥಮಾಡಿ ಕೊಳ್ಳುವಾತನಾಗಿದ್ದಾನೆ. ಆತನು ನಮಗೆ ಒದಗಿಸಿದ್ದಾನೆ ಮತ್ತು ನಡಿಸಿದ್ದಾನೆ. ಇದೆಲ್ಲದಕ್ಕಾಗಿಯೂ ಮತ್ತು ಇನ್ನೂ ಹೆಚ್ಚಾದದ್ದಕ್ಕಾಗಿಯೂ ನಾವು ಆತನಿಗೆ ಕೃತಜ್ಞತೆಯುಳ್ಳವರಾಗಿದ್ದೇವೆ.

ನಮ್ಮ ಕ್ಷೇಮಕ್ಕಾಗಿ ಅಗತ್ಯವಾಗಿರುವ ದೇವರ ಗುಣಲಕ್ಷಣಗಳಲ್ಲಿ ಇನ್ನೊಂದನ್ನು ನಾವಿನ್ನೂ ಆಲೋಚಿಸಿಲ್ಲ. ದೇವರು ನೈತಿಕತೆಯುಳ್ಳ ಜೀವಿಯಾಗಿರದಿದ್ದರೆ ನಾವು ಪರೀಕ್ಷಿಸಿದ ದೇವರ ಎಲ್ಲಾ ಗುಣಗಳು ನಮ್ಮನ್ನು ವಿರೋದವಾದ, ದು ಃಖಭರಿತ ಸ್ಥಿತಿಗೆ ನಡಿಸಬಹುದಿತ್ತು. ಇಲ್ಲಿಯ ಮತ್ತು ನಿತ್ಯತ್ವದಲ್ಲಿಯ ನಮ್ಮ ಕ್ಷೇಮವು ದೇವರ ನೈತಿಕತೆಯ ಮೇಲೆ ಅವಲಂಭಿಸಿರುತ್ತದೆಂದು ಹೇಳುವುದು ಅತಿಶಯೋಕ್ತಿಯಾಗಲಾರದು. ಆದುದರಿಂದ ಈ ಅತೀ ಪ್ರಾಮುಖ್ಯವಾದ ಗುಣಲಕ್ಷಣವನ್ನು ಅಧ್ಯಯನ ಮಾಡೋಣ.

## ಸ್ಥಾಪಿಸಲ್ಪಟ್ಟ ಸತ್ಯ

ಸಂಪೂರ್ಣ ನೈತಿಕತೆಯುಳ್ಳವನಾಗಿರುವುದು ಸಂಪೂರ್ಣವಾಗಿ ಪರಿಶುದ್ಧವಾಗಿರುವುದಾಗಿದೆ. ಪರಿಪೂರ್ಣ ಪರಿಶುದ್ಧತೆಯು ನೈತಿಕ ಮತ್ತು ಆತ್ಮಿಕ ಪರಿಪೂರ್ಣತೆಯ ಸ್ಥಿತಿಯಾಗಿದೆ. ಇದನ್ನು ದೇವರಿಗೆ ಮಾತ್ರ ಸಂಬಂಧಿಸಿ ಹೇಳಬಹುದು. ಭೂಲೋಕದಲ್ಲಿ ಮತ್ತು ಪರಲೋಕದಲ್ಲಿ ದೇವರ ಪರಿಶುದ್ಧತೆಯ ಅನೇಕ ದೃಢಪಡಿಸುವಿಕೆಗಳು ಬೈಬಲಿನಲ್ಲಿರುತ್ತವೆ. ಈ ಕೆಳಗಿನ ಉದಾಹರಣೆಗಳನ್ನು ಯೋಚಿಸಿರಿ.

ಮರಿಯಳು ತನ್ನ ಮಗನ ಜನನದ ನಿರೀಕ್ಷೆಯಲ್ಲಿ ಇದ್ದಾಗ ಈ ರೀತಿಯಲ್ಲಿ ಸಂಗೀತದಲ್ಲಿ ಹೇಳಿದಳು, "... ಶಕ್ತನಾಗಿರುವಾತನು ನನಗೆ ದೊಡ್ಡ ಉಪಕಾರಗಳನ್ನು ಮಾಡಿದ್ದಾನೆಿ ... ಆತನ ನಾಮವು ಪರಿಶುದ್ಧವಾದದ್ದು" (ಲೂಕ 1:49).

ಅಪೊಸ್ತಲ ಯೋಹಾನನ ಮುಂದೆ ಪರಲೋಕದ ದೃಶ್ಯವು ತೆರೆಯಲ್ಪಟ್ಟಾಗ ಜನರಿಂದಲೂ ದೇವದೂತರಿಂದಲೂ ಸುತ್ತುವರಿದ ದೇವರ ಸಿಂಹಾಸನವನ್ನು ಅವನು ನೋಡಿದನು. "ಜೀವಿಸುವ ಜೀವಿಗಳು" ಎಡೆಬಿಡದೆ ಹೀಗೆ ಹಾಡಿದರು, "ದೇವರಾದ ಕರ್ತನು ಪರಿಶುದ್ಧನು ಪರಿಶುದ್ಧನು ಪರಿಶುದ್ಧನುಣಿ ಆತನು ಸರ್ವಶಕ್ತನು, ವರ್ತಮಾನ ಭೂತ - ಭವಿಷತ್ಕಾಲಗಳಿರುವಂಥವನು" (ಪ್ರಕಟನೆ 4:8ಬಿ). "ಜೀವಿಸುವ ಜೀವಿಗಳು" ಸಿಂಹಾಸನದ ಮೇಲಿರುವಾತನಿಗೆ ಮಹಿಮೆಯನ್ನೂ ಗೌರವವನ್ನೂ ಸಲ್ಲಿಸಿದರು. ನಿತ್ಯನಾದಾತನನ್ನು ಆರಾಧಿಸಿದ ಇಪ್ಪತ್ನಾಲ್ಕು ಜನ ಹಿರಿಯರು ಅವರೊಂದಿಗೆ ಸೇರಿ ಹೀಗೆ ಹಾಡಿದರು, "ಕರ್ತನೇ ನಮ್ಮ ದೇವರೇ, ನೀನು ಪ್ರಭಾವಮಾನ ಬಲಗಳನ್ನು

ಹೊಂದುವದಕ್ಕೆ ಯೋಗ್ಯನಾಗಿದ್ದೀಣಿ ಸಮಸ್ತವನ್ನು ಸೃಷ್ಟಿಸಿದಾತನು ನೀನೇಣಿ ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು. ನಿನ್ನ ಚಿತ್ತದಿಂದಲೇ ನಿರ್ಮಿತವಾದವು" (ಪ್ರಕಟನೆ 4:9-11). ಜಗತ್ತಿನ ಸೃಷ್ಟಿಯಾಗುವಿಕೆಗಿಂತ ಮೊದಲು ಸಹ ದೇವರು ಪರಿಶುದ್ಧನಾಗಿದ್ದನೆಂದು "ಪಾರಲೌಕಿಕ ದೃಷ್ಟಿಕೋನದಿಂದ" ನಾವು ನೋಡುತ್ತೇವೆ. ಪರಿಶುದ್ಧನಾಗಿರುವಂಥ ಆತನ ಸ್ವಭಾವವು ಸರ್ವಜ್ಞಾನಿಯೂ ಸರ್ವಶಕ್ತನೂ ಆಗಿರುವ ಆತನ ಸ್ವಭಾವವಾಗಿದೆ.

ಅತ್ಯುನ್ನತ ಸಿಂಹಾಸನದ ಮೇಲೆ ಕುಳಿತ ಸೆರಾಫಿಯರೊಂದಿಗಿದ್ದ ದೇವರ ದರ್ಶನವು ಪ್ರವಾದಿ ಯೆಶಾಯನಿಗೆ ಆದಾಗ "ಪಾರಲೌಕಿಕ ಪ್ರತ್ಯಕ್ಷತೆಯು" ಎದುರಿಗೆ ಬರುತ್ತದೆ. "ಸೈನ್ಯಗಳ ಅಧಿಪತಿಯಾದ ಯೆಹೋವನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನುಣಿ ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ" (ಯೆಶಾಯ 6:1-3) ಎಂದು ಅವರು ಸ್ತುತಿಸಿದರು.

ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ದೇವರ ಪರಿಶುದ್ಧತೆಯನ್ನು ಒತ್ತಿ ಹೇಳುವ ಈ ದೃಶ್ಯಗಳು ಸ್ಪಷ್ಟವಾಗಿ ಆತನ ಸೃಷ್ಟಿಗೆ ಸಂಬಂಧಿಸಿದೆ: "ಭೂಮಂಡಲವೆಲ್ಲ ಆತನ ಮಹಿಮೆಯಿಂದ ತುಂಬಿದೆ." ಆತನು ಪ್ರತಿಯೊಂದನ್ನು ಸೃಷ್ಟಿಸಿದ್ದರಿಂದ ಮಹಿಮೆಯನ್ನೂ ಗೌರವವನ್ನೂ ಸ್ವೀಕರಿಸಲು ಆತನು ಯೋಗ್ಯನು. ಆದುದರಿಂದ, ಆತನ ಸೃಷ್ಟಿಯು ಪರಿಶುದ್ಧತೆಯ ಪ್ರಭಾವಳಿಯ ಕಿರೀಟ ಹೊಂದಿದೆ ಎಂದು ಹೇಳಬಹುದು. ಶಕ್ತಿ, ಸೌಂದರ್ಯ ಮತ್ತು ಕ್ರಮವನ್ನು ನಾವು ಕಂಡುಕೊಳ್ಳುವಂತೆ ಸೃಷ್ಟಿಯಲ್ಲಿ ನಾವು ನೈತಿಕ ಗುಣವನ್ನು ಕಂಡುಕೊಳ್ಳುವೆವು.

## ಆಜ್ಞಾಪಿಸಲ್ಪಟ್ಟ ಸತ್ಯ

ಸೃಷ್ಟಿಯಲ್ಲಿ ಮತ್ತು ಇತಿಹಾಸದಲ್ಲಿ ನಮಗಾಗಿ ದೇವರ ಪೂರ್ವಾಪರ ಸಂದರ್ಭ ಇರುವದನ್ನು ಚರ್ಚಿಸಿದ ನಂತರ, ಈಗ ನಾವು ನಮಗಾಗಿ ದೇವರ ನೈತಿಕತೆಯ ಅನ್ವಯ ಕುರಿತು ಅರಿತವರಾಗಿರಲು ಬಯಸುತ್ತೇವೆ. ದೇವರು ನಮ್ಮ ಜೀವಿತಗಳ ಮೂಲಕರ್ತನೂ (ಸೃಷ್ಟಿಯಲ್ಲಿ) ಮತ್ತು ನೆಲೆಗೊಳಿಸುವವನೂ (ಚರಿತ್ರೆಯಲ್ಲಿ) ಆಗಿದ್ದಾನೆ. ಆತನು ಪರಮ ಶ್ರೇಷ್ಠ ಪರಿಶುದ್ಧನಾದದ್ದರಿಂದ ಮಾನವರು ನೈತಿಕ ಜೀವಿಗಳಾಗಿರುವದನ್ನು ನಾವು ನಿರೀಕ್ಷಿಸಬೇಕಾಗಿದೆ. ನಿರೀಕ್ಷೆಯು ಸರಿಯಾದದ್ದೇ. ನಾವು ನೀತಿಯ ಜೀವಿಗಳಾಗಿ ಸೃಷ್ಟಿಸಲ್ಪಟ್ಟಿದ್ದೇವೆ. ಇದು ಪತನಕ್ಕಿಂತ ಮೊದಲಿನ ಪುರುಷನ ಮತ್ತು ಸ್ತ್ರೀಯ ಸ್ಥಿತಿಯಾಗಿತ್ತು. ಅವರಿಗೆ ದೇವರೊಂದಿಗೆ ನೇರವಾದ ಅನ್ಯೋನ್ಯತೆಯಿತ್ತು. ಯಾಕಂದರೆ ದೇವರಿಗೆ ಅವರು ಪರಿಶುದ್ಧರಾಗಿದ್ದರು. ಹಾಗಿದ್ದರೂ ಅವರು ಪಾಪ ಮಾಡಿದ ನಂತರ ಭಯವುಳ್ಳವರೂ ನಾಚಿಕೆಪಡುವವರೂ ಆದರು. ಅವರ ಆದಿ ಸ್ಥಿತಿಯು ಕುರೂಪವಾಗಿ ಮಾರ್ಪಟ್ಟಿತು. ಅವರ ನೈತಿಕ ಶುದ್ಧತೆಯು ಹೊರಟು ಹೋಯಿತು. ಇದು ನಾವೆಲ್ಲರೂ ಅನುಭವಿಸುವ ಪುರಾತನಕಾಲದ ಸತ್ಯವಾಗಿದೆ:

> ... ಆದಾಗ್ಯೂ ನಾನು ತಿಳಿದಿರುವೆನು, ನಾನು ಹೋಗುವಲ್ಲೆಲ್ಲಾ, ಭೂಲೋಕದಿಂದ ಮಹಿಮೆಯು ದಾಟಿ ಹೋಗಿರುವುದು.[1]

ಒಮ್ಮೆ ಪರಿಶದ್ಧವಾಗಿದದ್ದು ಈಗ ಗಾಯದ ಕಲೆಯುಳ್ಳದ್ದಾಯಿತು.

ದೇವರ ಜನರು ದೇವರ ಕಡೆಗೆ ತಿರುಗಿ ಕೊಳ್ಳಲು ಮತ್ತು ಪುನ ಆತನ ಪರಿಶುದ್ಧತೆಯಲ್ಲಿ ಭಾಗವಹಿಸಲು ಕರೆಯಲ್ಪಟ್ಟರು: "ನಾನು ನಿಮ್ಮ ದೇವರಾದ ಯೆಹೋವನುಣಿ ಆದುದರಿಂದ, ನೀವು ನಿಮ್ಮನ್ನು ಪ್ರತಿಷ್ಠಿಸಿಕೊಳ್ಳಿರಿ. ನಾನು ಪರಿಶುದ್ಧನಾಗಿರುವದರಿಂದ ನೀವೂ ಪರಿಶುದ್ಧರಾಗಿರಬೇಕು" (ಯಾಜಕಕಾಂಡ 11:44ಎ). ತನ್ನ ಬಳಿಗೆ ಅವರು ಹಿಂದಿರುಗಿಬರಬೇಕು

ಮತ್ತು ತನ್ನ ಸಹಾಯದಿಂದ ಪರಿಶುದ್ಧ ಜೀವನ ನಡಿಸಬೇಕು ಎಂಬ ದೇವರ ಅಪೇಕ್ಷೆಯು ನೈತಿಕತೆಯ ಬಗ್ಗೆ ಬೈಬಲಿನ ಬೋಧನೆಯು ಬಹು ಬೆಲೆಯುಳ್ಳದ್ದಾಗಿದೆ. ದೇವರ ಪರಿಶುದ್ಧ ತೆಯು ನಮ್ಮ ನೈತಿಕ ಹೊಣೆಗಾರಿಕೆಗೆ ತಳಹದಿಯಾಗಿದೆ. ನಾವು ಜೀವಿಸುವ ಮಾರ್ಗವನ್ನು ಆತನು ಆಜ್ಞಾಪಿಸಿದ್ದಾನೆ. ಆದುದರಿಂದ ನಮ್ಮ ಜೀವಿತಗಳ ಬಗ್ಗೆ "ಕರ್ತವ್ಯ ಬದ್ಧತೆ" ಯಿರುವುದು. ನಾವು ಆತನಿಂದ ಸ್ವೀಕರಿಸಲ್ಪಡಬೇಕಾಗಿದ್ದರೆ ನಮ್ಮ ನೈತಿಕತೆಯು ಆತನ ಬೋಧನೆಗೆ ಹೊಂದಿಕೊಂಡಿರತಕ್ಕದ್ದು.

ನಾವು ಏನು ಆಗಿರಬೇಕೆಂಬುದರ ಮತ್ತು ಏನು ಮಾಡಲ್ಪಡಬೇಕೆಂಬುದರ "ಕರ್ತವ್ಯ ಬದ್ಧತೆಯು" ಮನಸಾಕ್ಷಿಯ ತಳಹದಿಯ ಮೇಲೆ ನಿರ್ಧರಿಸಲ್ಪಡಲಾರದು. ಮನಸ್ಸಾಕ್ಷಿಗೆ ಚಿನ್ನಹವು ಬಹಳ ಸಲ ಉದಾರವಾದ ಮನವಿಯಾಗಿರುತ್ತದೆ. ಹಾಗಿದ್ದರೂ, ನಮ್ಮ ಜೀವಿತಗಳ ಇತರ ಎಲ್ಲಾ ವಿಷಯಗಳ ಹಾಗೆಯೇ ನಮ್ಮ ಮನಸ್ಸಾಕ್ಷಿಗಳು ಪಾಪದ ಕೆಳಗೆ ಬಿದ್ದು ಹೋಗಿರು ವದನ್ನು ನಾವು ತಿಳಿದುಕೊಳ್ಳತಕ್ಕದ್ದು. ಆದುದರಿಂದ ನಮ್ಮ ಮನಸ್ಸಾಕ್ಷಿಗಳು ಲೋಪವುಳ್ಳ ವುಗಳಾಗಿವೆ. ಒಂದು ಕಡೆಯಲ್ಲಿ ನಮ್ಮ ಮನಸ್ಸಾಕ್ಷಿಗಳನ್ನು ಎಂದೂ ಅತಿಕ್ರಮಿಸಬಾರದು: ಇನ್ನೊಂದು ಕಡೆಯಲ್ಲಿ ಅದನ್ನು ನಮ್ಮ ಅಂತಿಮ ಮಾರ್ಗದರ್ಶಿಯಾಗುವಂತೆ ಬಿಡಬಾರದು. ದೇವರ ಆಜ್ಞೆಗಳು ನಮ್ಮ ಮನಸ್ಸುಗಳಿಗೂ ನಮ್ಮ ಮನಸ್ಸಾಕ್ಷಿಗೂ ಬೋಧಿಸುವ ನಮ್ಮ ಮಾರ್ಗ ದರ್ಶಿಯಾಗಿರತಕ್ಕದ್ದು. ಇದರ ಅರ್ಥ ನಮ್ಮ ನೈತಿಕತೆಯು ನಮ್ಮ ಮನಸ್ಸಂಬಂಧವಾಗಿರದೆ, ದೇವರ ವಾಕ್ಯದ ಮೇಲೆ ಅವಲಂಭಿಸಿರತಕ್ಕದ್ದು.

ನಮ್ಮ ನೈತಿಕ ಮಟ್ಟಗಳು ಬೇರೆಯೆಲ್ಲಿಯೂ ನ್ಯಾಯ ಬದ್ಧವಾಗಿ ದೊರೆಯಲಾರವು. ಉದಾಹರಣೆಯಾಗಿ *ನೈತಿಕತೆಗಾಗಿ ಶಕ್ತಿಯನ್ನು ತಳಹದಿಯಾಗಿ ತೆಗೆದು ಕೊಳ್ಳಲಾರೆವು.* ಅದು ಜನಾಂಗಗಳ ಇಲ್ಲವೇ ವ್ಯಕ್ತಿಗಳ ಮಧ್ಯದಲ್ಲಿ ಸರಿಪಡಿಸಲಾರದು.

*ಯಾವುದಾದರೂ ಅಪೇಕ್ಷಿತ ಅಂತ್ಯವನ್ನು ಪೂರ್ತಿಗೊಳಿಸುವ ಕಾರ್ಯಮಾಡುವ ಕಾರಣದಿಂದ ಅದು ನೈತಿಕವಾದದ್ದು ಆಗಿರುವದಿಲ್ಲ* ಎಂಬುದನ್ನು ನಾವು ತಿಳಿದಿದ್ದೇವೆ. ಇದು ಸತ್ಯವಾಗಿದ್ದರೆ ದೈವಿಕ ಜಾಗತಿಕ ಮಹಾಯುದ್ಧದ ಸಮಯದಲ್ಲಿ ನಾಝಿಗಳಿಂದ ಒಂದು ಜನಾಂಗವನ್ನು ನಾಶಮಾಡುವ ಉದ್ದೇಶದಿಂದ ಮಿಲಿಯನ್‌ಗಟ್ಟಲೆ ಜೀವಿಗಳ ನ್ನು ಕೊಲೆಮಾಡಿದ್ದು ನೈತಿಕವಾದದ್ದಾಗಿರುತ್ತಿತ್ತು. ಸರ್ವನಾಶನ ಮಾಡುವಂಥದ್ದು (holocaust) ಅಪೇಕ್ಷಿತ ಅಂತ್ಯದ ಕಡೆಗೆ ಗುರಿಯಾಗಿತ್ತು. ಆದರೆ ಅದು ನೈತಿಕವಾ ದದ್ದಾಗಿರಲಿಲ್ಲ. ಅಪೇಕ್ಷಿತ ಅಂತ್ಯವನ್ನು ಸಮರ್ಥಿಸಿಕೊಳ್ಳುವ ಯಾವುದೇ ಸಾಧನವು ಆ ಅಂತ್ಯದ ಪರಿಣಾಮವನ್ನು ನೈತಿಕವಾಗಿ ಮಾಡಿದರೆ, ಬೇಡಿಕೆಯಿಂದ ಗರ್ಭಪಾತ ವಾಗುವಂಥದ್ದರಿಂದ ಜಗತ್ತಿನಲ್ಲಿ ಮಿಲಿಯನ್‌ಗಟ್ಟಲೆ ಸಂಖ್ಯೆಯಲ್ಲಿ (ಪ್ರತೀ ವರ್ಷ 1,500,000ಕ್ಕಿಂತ ಹೆಚ್ಚು) ಜೀವಗಳನ್ನು ಕೊಲ್ಲುತ್ತಿರುವುದು ನೈತಿಕವಾದದ್ದಾಗುವುದು[2] ಆಗಿರುವುದೋ?

*"ಈ ರೀತಿಯಲ್ಲಿಯೇ ಸಂಗತಿಗಳಿರುತ್ತವೆ" ಎಂಬ ಕಾರಣದಿಂದ ಯಾವುದೂ ನೈತಿಕವಾಗಿರಲಾರದು.* ನಾವು ಪರಿಪೂರ್ಣ ಜಗತ್ತಿನಲ್ಲಿ ಜೀವಿಸುತ್ತಿದ್ದರೆ ಸ್ವಾಭಾವಿ ಕವಾಗಿ ಬರುವಂಥದ್ದನ್ನು ಮಾಡುವುದು ಪರಿಪೂರ್ಣವಾದದ್ದಾಗಿರುತ್ತಿತ್ತು. ಮಾನವರು ಅಪರಿಪೂರ್ಣವಾಗಿದ್ದುದರಿಂದ ಪಾಪಿಗಳಾಗಿದ್ದ ನಮ್ಮ ಸ್ವಾಭಾವಿಕ ಒಪ್ಪುವಿಕೆ ನಿಜವಾದ ನೈತಿಕತೆಗೆ ತಳಹದಿ ಯಾಗಿರುವದಿಲ್ಲ. ಅದು ಹಾಗಿದ್ದರೆ, ಕಳ್ಳರ ಬಗ್ಗೆ ಎಚ್ಚರಿಸುವ ಗಂಟೆಗಳು, ಸುರಕ್ಷಿತ - ಕಾವಲುಗಾರರು, ದೇಶದಲ್ಲೆಲ್ಲಾ ಬೀಗಹಾಕಿದ ಬಾಗಿಲುಗಳುಳ್ಳ ಮನೆಗಳು ಇಲ್ಲವೇ ಸಾಮಾಜಿಕ ಹಾಗೂ ಆರೋಪಿತ ಅಪರಾಧಗಳಿಂದ ತುಂಬಿದ ಸೆರೆಮನೆಗಳು ಇವುಗಳ ಬಗ್ಗೆ ಹೇಗೆ ವಿವರಿಸಬಹುದು? ಎಲ್ಲವೂ ಸರಿಯಾಗಿರುವಲ್ಲಿ ಬಹುಜನ ಕಲ್ಯಾಣ ಸೇವೆಯು ನೈತಿಕತೆಗೆ ತಳಹದಿಯಾಗಿರುವದಿಲ್ಲ. ನಿಜವಾದ ನೈತಿಕತೆಯು "ನೈಸರ್ಗಿಕ

ವಾಗಿ ಬರುವಂಥ" ರಂಗವನ್ನು ಬಿದ್ದುಹೋದ ಜಗತ್ತು ಒದಗಿಸಿಕೊಡುವದಿಲ್ಲ. ನಾವು ಬೇರೆ ಕಡೆಗಳಲ್ಲಿ ನೋಡತಕ್ಕದ್ದು.

ದೇವರ ಸ್ವಭಾವವು ಆತನ ಪರಿಶುದ್ಧತೆಯಿಂದ ಅತೀ ಶ್ರೇಷ್ಠವಾಗಿ ಪ್ರದರ್ಶಿಸಲ್ಪಟ್ಟಿದೆ. ಆತನ ಪರಿಶುದ್ಧತೆಯು ನಮ್ಮ ನೈತಿಕ ಜೀವನಗಳ ಅಸ್ತಿವಾರವೂ ಮಾರ್ಗದರ್ಶನವೂ ಆಗಿರುತ್ತದೆ. ಹಳೇ ಒಡಂಬಡಿಕೆಯಲ್ಲಿಯ ಆತನ ಹೇಳಿಕೆಯು ಸ್ಪಷ್ಟವಾದದ್ದೂ ತಪ್ಪಿಲ್ಲದ್ದೂ ಆಗಿದೆ: "ನಿಮ್ಮ ದೇವರಾದ ಯೆಹೋವನು ಪರಿಶುದ್ಧನಾಗಿರುವಂತೆಯೇ ನೀವೂ ಪರಿಶುದ್ಧರಾಗಿರ್ರಿ" (ಯಾಜಕಕಾಂಡ 19:2ಬಿ). ಇದು ಹೊಸ ಒಡಂಬಡಿಕೆಯಲ್ಲಿಯೂ ಪ್ರತಿಧ್ವನಿಸುತ್ತದೆ: "ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವು ವಿಧೇಯರಿಗೆ ತಕ್ಕಂಥೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ" (1 ಪೇತ್ರ 1:15). ನಮ್ಮ ನೈತಿಕತೆಗೆ ತಳಹದಿಯಾಗಿರುವಂಥ ನೈತಿಕ ಪರಿಪೂರ್ಣತೆಯುಳ್ಳ ದೇವರ ಕಡೆಗೆ ನಾವು ನೋಡುತ್ತೇವೆ. ಹೀಗೆ ಸರಿಯಾಗಿರಬೇಕು ಹಾಗೂ ಸರಿಯಾದಂಥದ್ದನ್ನು ಮಾಡಬೇಕು ಎಂದು ಹೇಳುವ ದೇವರನ್ನು ನಾವು ಬೈಬಲಿನಲ್ಲಿ ಕಂಡುಕೊಳ್ಳುತ್ತೇವೆ. ಯಾಕಂದರೆ ಆತನು ಸರಿಯಾದಾತನಾಗಿರುತ್ತಾನೆ.

ನಾವಿರುವಂಥದ್ದು ಹೇಗೆ "ಇರತಕ್ಕದ್ದು?" ನಾವು ಹೇಗೆ "ಇರತಕ್ಕದ್ದು" ಎಂಬುದನ್ನು ದೇವರು *ನಿರ್ದಿಷ್ಟವಾಗಿ* ಹೇಳುವದಲ್ಲದೇ ನಾವು ಏನು "ಆಗಿರತಕ್ಕವರು," ಹೇಗೆ *ಆಗುವೆವು* ಎಂಬುದನ್ನೂ ಆತನು ತೋರಿಸುತ್ತಾನೆ. ದೇವರ ಕುಮಾರನಾದ ಯೇಸು ಕ್ರಿಸ್ತನು, "ಸ್ವಂತ ಚಿತ್ತ ನೆರವೇರಬೇಕೆಂದು ಅಪೇಕ್ಷಿಸದೇ ನನ್ನನ್ನು ಕಳುಹಿಸಿದಾತನ ಚಿತ್ತ ನೆರವೇರ ಬೇಕೆಂದು ಅಪೇಕ್ಷಿಸುತ್ತೇನೆ" ಎಂದು ಹೇಳಿದನು (ಯೋಹಾನ 5:30ಬಿ). ತನ್ನ ತಂದೆಯ ಚಿತ್ತದೊಂದಿಗೆ ಆತನ ಹೊಂದಾಣಿಕೆಯಲ್ಲಿ ಆತನಲ್ಲಿ ದೇವರ ನೈತಿಕ ಶ್ರೇಷ್ಠತೆಯನ್ನು ನಾವು ನೋಡುತ್ತೇವೆ. ಆದುದರಿಂದ ಕ್ರಿಸ್ತನಿಗೆ ನಮ್ಮ ಹೊಂದಾಣಿಕೆಯಲ್ಲಿ ನಮ್ಮ ಅನೈತಿಕತೆಯನ್ನು ಹೊರಗೆ ಹಾಕೋಣ. ಹಾಗೂ ಆತನ ಜೀವನ ಶುದ್ಧತೆಯು ನಮ್ಮಲ್ಲಿ ಕಂಡುಬರಲಿ. ನಂಬಿಕೆಯಲ್ಲಿ ಮತ್ತು ಮಾನಸಾಂತರದಲ್ಲಿ ಬಾಪ್ತಿಸ್ಮದಲ್ಲಿ "ಕ್ರಿಸ್ತನೊಂದಿಗೆ ನಮ್ಮನ್ನು ಧರಿಸಿಕೊಳ್ಳುವಾಗ" ನಾವು ಆತನೊಂದಿಗೆ ಹೂಣಲ್ಪಡುತ್ತೇವೆ, ಶುದ್ಧೀಕರಿಸಲ್ಪಡುತ್ತೇವೆ ಹಾಗೂ ಜೀವನದ ನೂತನತೆಯಲ್ಲಿ ನಡೆಯಲು ಎಬ್ಬಿಸಲ್ಪಡುತ್ತೇವೆ (ಅಪೊಸ್ತಲರ ಕೃತ್ಯ 2:38ಣಿ ರೋಮಾಪುರ 6:3, 4ಣಿ ಗಾಲತ್ಯ 3:26, 27). ಆತನ ಕೃಪೆಯಿಂದ ನಮ್ಮ ನಂಬಿಕೆಯ ಮುಖಾಂತರ ನಾವು ಏನಾಗಬೇಕೆಂದು ದೇವರು ಬಯಸುವಂಥವರು ಆಗುತ್ತೇವೆ (ಎಫೆಸ 2:8, 9).

## ಕಾರ್ಯಗತಗೊಳಿಸಲ್ಪಟ್ಟ ಸತ್ಯ

ಕ್ರಿಸ್ತನಲ್ಲಿಯ ನೂತನ ಜೀವಿತಕ್ಕೆ ಅನೇಕ ಮುಖಗಳಿದ್ದರೂ ನಮಗೆ ಈ ಪಾಠದಲ್ಲಿ ಸಂಬಂಧಿಸಿದ್ದು ನೈತಿಕ ಜೀವನ. ನೈತಿಕವಾಗಿ ನಾವು ಹೇಗೆ ಜೀವಿಸಬೇಕು? ಉತ್ತರವು ಸರಳವಾದದ್ದಾಗಿ ತೋರಿತ್ತುದೆ: ದಿನದಿನದ ತಳಹದಿಯ ಮೇಲೆ ಅನೈತಿಕ ಯೋಚನೆಗಳನ್ನು ನಡತೆಯನ್ನು ತಪ್ಪಿಸಿಕೊಳ್ಳಬೇಕು ಹಾಗೂ ನೈತಿಕ ನಡತೆಯನ್ನು ಅಭ್ಯಸಿಸಿಕೊಳ್ಳಬೇಕು. ನೈತಿಕತೆ ಯಾವುದು, ಅನೈತಿಕತೆಯಾವುದು? ಈ ಮೊದಲು, ನಾವು ಕೆಲವು ತತ್ವಗಳನ್ನು ನೋಡಿದ್ದೇವೆಣಿ ಈಗ ನಿರ್ದಿಷ್ಟವಾದವುಗಳನ್ನು ನೋಡೋಣ. ಹಾಗೆ ಮಾಡುವಾಗ ನಾವು ವಿಷಯವನ್ನು ಪೂರ್ಣವಾಗಿ ಮುಗಿಸುವದಿಲ್ಲ. "ಸರಿಯಾದ" ದಿಕ್ಕಿನ ಕಡೆಗೆ ಮಾತ್ರ ತೋರಿಸುತ್ತೇವೆ.

ನಮ್ಮ ದೇವರು ನೀತಿಯುಳ್ಳವನಾಗಿದ್ದಾನೆ. ಆತನ ಪರಿಶುದ್ಧತೆಯು ಎಲ್ಲಾ ನೈತಿಕ ಕರ್ತವ್ಯಗಳಿಗೆ ತಳಹದಿಯಾಗಿದೆ. ಅದು ಬಹಳ ಸಲ ಪರಿಶುದ್ಧ ಬರಹಗಳಲ್ಲಿ ನಿರ್ದಿಷ್ಟವಾಗಿ

ಪ್ರದರ್ಶಿಸಲ್ಪಟ್ಟಿದೆ. ನಿಷೇದಾರ್ಥಕವಾದ ಈ ಕೆಳಗಿನ ನಿರ್ದೇಶನಗಳನ್ನು ಗಮನಿಸಿರಿ: ಕೊಲ್ಲ *ಬೇಡ,* ವ್ಯಭಿಚಾರಮಾಡಬೇಡ, ಕದಿಯಬೇಡ, ಸುಳ್ಳು ಸಾಕ್ಷಿ ಹೇಳಬೇಡ, ಅಂಗಹೀನನ್ನಾಗಿ ಮಾಡಬೇಡ, ಲೈಂಗಿಕ ಬಲಾತ್ಕರ ಮಾಡಬೇಡ, ತಂದೆತಾಯಿಗಳಿಗೆ ಅಗೌರವ ಮಾಡಬೇಡ ಇಲ್ಲವೇ ಗಾಯಮಾಡಬೇಡ, ಸುಳ್ಳುಹೇಳಬೇಡಣಿ ಅಪ್ರಮಾಣಿಕನಾಗಬೇಡ, ವ್ಯಭಿಚಾರದಲ್ಲಾಗಲೀ ಸೂಳೆಗಾರಿಕೆಯಲ್ಲಾಗಲೀ ತೊಡಗಿರಬೇಡ, ಬಂಧುವಿನ ಜೊತೆ ಲೈಂಗಿಕ ಸಂಬಂಧ ಬೇಡ, ಸಲಿಂಗ ರತಿ ಕಾರ್ಯದಲ್ಲಿ ತೊಡಗಬೇಡ, ವಿರೂಪ ಕಾರ್ಯಗಳನ್ನು ಮಾಡಬೇಡ.[3] ಈಗ ಸಾಕಾರಾತ್ಮಕವಾದ ನಿರ್ದೇಶನಗಳನ್ನು ಗಮನಿಸಿರಿ: ಕರುಣೆಯಿಂದಿರುವುದು, ಸಮಾಧಾನ ಪಡಿಸುವುದು, ಉದಾರಿಯಾಗಿರುವುದು, ಪ್ರೀತಿಸುವುದು, ಯಥಾರ್ಥವಾಗಿರುವುದು, ಕರುಣೆ ತೋರಿಸುವುದು, ಜ್ಞಾನಿಯಾಗಿರುವುದು, ಶುದ್ಧನಾಗಿರುವುದು, ತಾಳ್ಮೆಯುಳ್ಳವನಾಗಿರುವುದು, ದಯೆಯುಳ್ಳವನಾಗಿರುವುದು, ದೀನನಾಗಿರುವುದು ಹಾಗೂ ಗೌರವವುಳ್ಳವರಾಗಿರುವುದು.[4] ಈ ಪಟ್ಟಿಗಳು ಪೂರ್ಣವಾದವುಗಳಲ್ಲ. ಆದರೆ ಅವು ನಮಗೆ ಸರಿಯಾದ ದಿಕ್ಕನ್ನು ತೋರಿಸುತ್ತದೆ.

ನಮ್ಮ ದೇವರು ನೈತಿಕತೆಯುಳ್ಳವನು. ಆತನು ನಮ್ಮನ್ನು ತನ್ನ ಸ್ವರೂಪದಲ್ಲಿ ನಿರ್ಮಿಸಿದನು. ನಾವು ನೈತಿಕತೆಯುಳ್ಳವರಾಗಿರಬೇಕೆಂದು ಆತನು ಅಪೇಕ್ಷಿಸುತ್ತಾನೆ. ನೈತಿಕತೆ ಅಂದರೇನೆಂಬುದರ ಬಗ್ಗೆ ಆತನು ನಿರ್ದಿಷ್ಟತೆಯುಳ್ಳವನಾಗಿದ್ದಾನೆ. ಈ ಪಾಠದಲ್ಲಿ ನಾವು ಇವುಗಳನ್ನು ಕಲಿತುಕೊಂಡಿದ್ದೇವೆ: (1) ಪರಿಪೂರ್ಣವಾಗಿ ಪರಿಶುದ್ಧನಾದ ದೇವರು ಇರಬೇಕೆಂಬುದರ ಅರ್ಥವೇನು, (2) ಬಿದ್ದು ಹೋದ ತನ್ನ ಜೀವಿಗಳಿಗೆ ಅನೈತಿಕತೆ ಹಾಗೂ ಇತರ ಪಾಪಗಳನ್ನು ಬಿಟ್ಟು ಬಿಡುವ ಅವಕಾಶವನ್ನು ಆತನು ಹೇಗೆ ಕೊಟ್ಟಿದ್ದಾನೆ, ಹಾಗೂ (3) ನಾವು ನೈತಿಕ ಜೀವಿತಗಳನ್ನು ಜೀವಿಸಲು ಆಹ್ವಾನಿಸಲ್ಪಟ್ಟಿದ್ದೇವೆ. ಕೀರ್ತನೆಗಾರನು ಹೇಳಿದ್ದಾನೆ:

> ಕರ್ತನ ಕೃತ್ಯಗಳನ್ನು ಜ್ಞಾಪಿಸಿಕೊಳ್ಳುವೆನುಣಿ
> ಪುರಾತನ ಕಾಲದ ಆತನ ಅದ್ಭುತಗಳನ್ನು ನೆನಪು ಮಾಡಿಕೊಳ್ಳುವೆನು.
> ನಿನ್ನ ಎಲ್ಲಾ ಕಾರ್ಯಗಳನ್ನು ಧ್ಯಾನಿಸುವೆನುಣಿ
> ನಿನ್ನ ಪ್ರವರ್ತನೆಗಳನ್ನು ಸ್ಮರಿಸುವೆನು.
> ದೇವರೇ ನಿನ್ನ ಮಾರ್ಗವೂ ಪರಿಶುದ್ಧವಾದದ್ದು,
> ನಮ್ಮ ದೇವರಂತೆ ಮಹಿಮೆಯುಳ್ಳ ದೇವರು ಯಾರು?
> (ಕೀರ್ತನೆ 77:11-13).

ಟಿಪ್ಪಣಿಗಳು

[1]William Wordsworth, "Recollections of Early Childhood," in *Ode on the Imitations of Immortality,* lines 17-18. [2]F. LaGard Smith, *When Choice Becomes God* (Eugene, Ore.: Harvest House, 1990), 82-86. [3]ವಿಮೋಚನಕಾಂಡ 21:15ಣಿ ಯಾಜಕಕಾಂಡ 18:6-8, 23ಣಿ 19:11, 29, 35ಣಿ 20:13ಣಿ 24:19, 20ಣಿ ಧರ್ಮೋಪದೇಶಕಾಂಡ 5:17-20ಣಿ 19:3ಎಣಿ 22:25ಣಿ 1 ಕೊರಿಂಥ 6:18. [4]ಮತ್ತಾಯ 5:7-9, 22, 28, 31, 39, 42-47ಣಿ 6:1-4, 22, 23ಣಿ 7:12, 24-27ಣಿ 1 ಕೊರಿಂಥ 7:10-16ಣಿ ಗಲಾತ್ಯ 5:14, 22ಣಿ ಎಫೆಸ 5:3-5, 32ಣಿ 1 ಪೇತ್ರ 2:1, 11, 12ಣಿ 3:16ಣಿ 4:3, 4ಣಿ 5:5, 6ಣಿ 2 ಪೇತ್ರ 1:7.